# ಬೆಕ್ಹಾಮ್ ನಾಷ್ಟಾ



'ದುಡ್ಡೇ ದೊಡ್ಡಪ್ಪ' ಎನ್ನುವ ದೊಡ್ಡವರ ಹೊಟ್ಟೆ ನಮ್ಮಷ್ಟೇ ಸಣ್ಣದು. ಅವರು ತಿನ್ನುವ ಊಟದ ಪ್ರಮಾಣ ಕೂಡಾ ಬಡವರು ತಿನ್ನುವಷ್ಟೇ. ಆದರೆ ಆ ಊಟದ ದರ ಮಾತ್ರ ಬಹಳ ದುಬಾರಿ.

ಫುಟ್‌ಬಾಲ್ ಸೂಪರ್‌ಸ್ಟಾರ್ ಡೇವಿಡ್ ಬೆಕ್ಹಾಮ್‌ನ ಪ್ರಕರಣವನ್ನೇ ತಗೊಳ್ಳಿ. ಇಂಗ್ಲೆಂಡ್ ತಂಡದ ಈ ಮಾಜಿ ಕ್ಯಾಪ್ಟನ್ ಮೊನ್ನೆ ಫಿಲಡೆಲ್ಫಿಯಾದಲ್ಲಿ ಹೋಟೆಲೊಂದಕ್ಕೆ ಮುಂಜಾನೆಯ ನಾಷ್ಟಾ ಮಾಡಲು ಹೋದನಂತೆ. ಅದೂ ಪತ್ನಿ ವಿಕ್ಟೋರಿಯಾ ಮತ್ತು ಇಬ್ಬರು ಪುತ್ರರ ಜತೆ. ಸೆಲೆಬ್ರಿಟಿಗಳ ಅಚ್ಚುಮೆಚ್ಚಿನ ರೆಸ್ಟೋರೆಂಟ್ ಆಗಿರುವ ಬಾರ್ಕ್ಲೆ ಪ್ರೈಮ್ ರೆಸ್ಟೋರೆಂಟ್‌ನಲ್ಲಿ ಆತ ಆರ್ಡರ್ ಮಾಡಿದ ನಾಷ್ಟಾ ಅಂದರೆ– ಕೇವಲ ಒಂದು ಸ್ಯಾಂಡ್‌ವಿಚ್ ಅಷ್ಟೆ! ಆ ಒಂದು ಸ್ಯಾಂಡ್‌ವಿಚ್‌ನ ಬೆಲೆ 100 ಡಾಲರ್!

ಏನಪ್ಪಾ ವಿಶೇಷ ಅಂದಿರಾ? ಹಂದಿ ಮಾಂಸ, ಚೀಸ್, ಈರುಳ್ಳಿ, ಟೊಮ್ಯಾಟೋ ಅಷ್ಟೆ. ಆದರೆ ಇವೆಲ್ಲವನ್ನೂ ಎಷ್ಟೊಂದು ತೆಳ್ಳಗೆ ಕಟ್ ಮಾಡಿ ಸಾಸ್ ಹಾಕಿದ್ದರೆಂದರೆ, ಟೊಮ್ಯಾಟೋ ಮತ್ತು ಈರುಳ್ಳಿ ಕೂದಲಿನಷ್ಟೇ ತೆಳ್ಳಗಿತ್ತಂತೆ! ಈ ರೆಸ್ಟೋರೆಂಟ್‌ನಲ್ಲಿ ಸ್ಯಾಂಡ್‌ವಿಚ್ ಮಾಡುವ ಕ್ರಮ ಅತ್ಯಂತ ವಿಶಿಷ್ಟವಂತೆ! ಜಗತ್ತಿನ ಬೇರೆಲ್ಲೂ ಇಷ್ಟೊಂದು ತೆಳ್ಳಗೆ ಚೀಸ್ ಕತ್ತರಿಸುವ ತಜ್ಞರೇ ಇಲ್ಲವಂತೆ!

ಅದನ್ನೇ ಬಡವರು ತಿಂದರೆ 'ಹೊಟ್ಟೆಗಿಲ್ಲದೆ' ಎನ್ನುವವರು, ಶ್ರೀಮಂತರು ತಿಂದರೆ 'ವಾಹ್.. ಅದ್ಭುತ!' ಎನ್ನುತ್ತಾರೆ, ಅಲ್ವೆ?



# ಜೆನೆಟ್ ಕೇಶ ಶೃಂಗಾರ

ಜೆನೆಟ್ ಜಾಕ್ಸನ್ ಏನು ಮಾಡಿದರೂ ಅದು ಸುದ್ದಿಯೇ. 44ರ ಹರೆಯದ ಈ ಸುಂದರಿ ನಟಿ, ಗಾಯಕಿ, ಮಾಡೆಲ್ ಏನೆಲ್ಲಾ ಆಗಿ, ಕೂತದ್ದೂ ಸುದ್ದಿ– ನಿಂತದ್ದೂ ಸುದ್ದಿ! ಇತ್ತೀಚೆಗಿನ ಹೊಸ ಸುದ್ದಿ ಎಂದರೆ ಈಕೆ ತಲೆ ಬೋಳಿಸಿಕೊಂಡದ್ದು ಮತ್ತು ಆ ಬಳಿಕ ಸ್ವಲ್ಪವೇ ಕೂದಲು ಬೆಳೆದು ಅದರಲ್ಲೂ ಹೊಸ ವಿನ್ಯಾಸ ಮಾಡಿದ್ದು! ಇತ್ತೀಚೆಗಿನ ಪ್ಯಾರಿಸ್ ಫ್ಯಾಷನ್ ವೀಕ್‌ನಲ್ಲಿ ಈಕೆಯ ಕುರುಚಲು ತಲೆಕೂದಲಿನ ಹೊಸ ವಿನ್ಯಾಸ ನೋಡಿ ಡಿಸೈನರ್‌ಗಳೆಲ್ಲರೂ ಬೆರಗಾದರಂತೆ.

ಅಂದ ಹಾಗೆ, ಜೆನೆಟ್ ಜಾಕ್ಸನ್ ಈ ಫ್ಯಾಷನ್ ಷೋನಲ್ಲಿ ರ್‍ಯಾಂಪ್ ಮೇಲೆ ಹೆಜ್ಜೆ ಹಾಕಿದ್ದು ಹೊಸ ಗೆಳೆಯ ವಿಸ್ಸಾಂ ಅಲ್ ಮನಾ ಎಂಬ ಕೋಟ್ಯಧಿಪತಿ ಉದ್ಯಮಿಯ ಜತೆಗೆ! ಕಳೆದ ವರ್ಷ ಕೊಲ್ಲಿ ಪ್ರವಾಸ ಮಾಡಿದ ಜೆನೆಟ್‌ಗೆ ಅಲ್ಲಿ ಕತಾರ್‌ನ ಈ ಶ್ರೀಮಂತ ಉದ್ಯಮಿಯ ಪರಿಚಯ ಆಗಿದ್ದು, ಇತ್ತೀಚೆಗೆ ಇಬ್ಬರೂ ಕೈ ಕೈ ಹಿಡಿದುಕೊಂಡು ಅಮೆರಿಕಾದ ಫ್ಯಾಷನ್ ರೆಸ್ಟುರಾಗಳಲ್ಲಿ ತಿರುಗುತ್ತಿದ್ದಾರಂತೆ! ಗುಟ್ಟಾಗಿ ಇಬ್ಬರೂ ಮದುವೆ ಆಗಿದ್ದಾರೆಂದು ಗೊತ್ತಿಲ್ಲದವರು ಗೊತ್ತಿದ್ದಂತೆಯೇ ಹೇಳುತ್ತಿದ್ದಾರೆ.

# ರಾಜಕುವರನ ಆಟ



ಜಗತ್ತಿನ ಅತಿದೊಡ್ಡ ಶ್ರೀಮಂತ, ಬ್ರೂನಿಯ ಸುಲ್ತಾನ ಹಸನಲ್ ಬೋಲ್ಕಿಯಾ ಮುಜಾದ್ದೀನ್ ವಧಲಾ ತನ್ನ ಮೂರನೇ ಪತ್ನಿಯನ್ನು ಅರಮನೆಯಿಂದ ಡೈವೋರ್ಸ್ ಕೊಟ್ಟು ಹೊರಗೆ ಅಟ್ಟಿದ್ದು ಹಳೇ ಸುದ್ದಿ. ಹೊಸ ಸುದ್ದಿ ಏನೆಂದರೆ, ಆತನ ಮಗ, ರಾಜಕುವರ ಅಲ್ ಮುಹ್ತದೀ ಬಿಲ್ಲಾಹ್ ವಿಶ್ವ ಪೂಲ್ ಚಾಂಪಿಯನ್‌ಷಿಪ್‌ನಲ್ಲಿ ಈ ವರ್ಷ ಭಾಗವಹಿಸುತ್ತಾನೆ ಅನ್ನುವುದು. ನವೆಂಬರ್ 3ರಿಂದ 11ರವರೆಗೆ ನಡೆಯಲಿರುವ ಈ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ 45 ದೇಶಗಳ ಖ್ಯಾತನಾಮ ಆಟಗಾರರೆಲ್ಲ ಭಾಗವಹಿಸುತ್ತಿದ್ದಾರೆ. ಸದ್ಯಕ್ಕೆ 44ನೇ ರ್‍ಯಾಂಕ್ ಪಡೆದಿರುವ ರಾಜಕುವರ ಈ ಟೂರ್ನಿಯಲ್ಲಿ ಗೆಲ್ಲುವ ಬಗ್ಗೆ ದೇಶವಾಸಿಗಳೆಲ್ಲ ಉತ್ಸಾಹದಿಂದ ಕಾಯುತ್ತಿದ್ದಾರಂತೆ.

ಒಂದು ಪಂದ್ಯದಲ್ಲಿ ಗೆದ್ದರೂ ಸಾಕು; ಇಡೀ ರಾಜ್ಯಕ್ಕೇ ಭರ್ಜರಿ ಭೂರಿ ಭೋಜನ ಹಾಕಿಸಲು ದೊರೆ ನಿರ್ಧರಿಸಿದ್ದಾನಂತೆ. ದೊರೆಯ ಮಗ ಆಟ ಆಡುವುದೆಂದರೆ ಸಾಮಾನ್ಯ ವಿಷಯವೇ? ಏಳು ತಲೆಮಾರು ಕೂತು ತಿಂದರೂ ಕೊಳೆಯದಷ್ಟು ಆಸ್ತಿ ಇರುವ ದೊರೆ, ಅಷ್ಟು ಹಣವನ್ನು ಇಟ್ಟುಕೊಂಡು ಮಾಡುವುದಾದರೂ ಏನನ್ನು? ಊಟ ಹಾಕಿಸಿದ ಪುಣ್ಯವಾದರೂ ಕಟ್ಟಿಕೊಳ್ಳಲಿ, ಬಿಡಿ!

■ ಬಿಂದು

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65